# ವಿವೇಕ ಶಾನಭಾಗರ 'ಜಾಮೀನು ಸಾಹೇಬ' ಕಥೆಯಲ್ಲಿನ ಸಮಕಾಲೀನ ತಲ್ಲಣಗಳು.

**ಮಹೇಶ್ ಬಿ. ಡಿ.**
ಸಂಶೋಧನಾ ವಿದ್ಯಾರ್ಥಿ
ಭಾರತೀ ಸ್ನಾತಕೋತ್ತರ ಹಾಗೂ
ಸಂಶೋಧನಾ ಕೇಂದ್ರ
ಭಾರತೀನಗರ.

**Article Link: https://aksharasurya.com/2023/08/mahesh-b-d/**

**ABSTRACT:**

ವಿವೇಕ ಶಾನಭಾಗರ ಜಾಮೀನು ಸಾಹೇಬ ಕಥೆಯು ಅವರ ಹುಲಿ ಸವಾರಿ ಕಥಾಸಂಕಲನದ ಪ್ರಮುಖ ಕಥೆಯಾಗಿದೆ. ನಿರುದ್ಯೋಗ ಸಮಸ್ಯೆಯ ತೀವ್ರತೆಯನ್ನು ಹೃದಯಕ್ಕೆ ತಾಗುವಾಗೆ ಬರಹದ ರೂಪಕ್ಕೆ ಇಳಿಸಿದ ಕಥೆ. ಬಡವರು, ಮಧ್ಯಮ ವರ್ಗದವರು, ಉನ್ನತ ಶಿಕ್ಷಣ ಪಡೆದರೂ ಓದಿದ ವಿದ್ಯಾರ್ಹತೆಗೆ ಸಮನಾದ ಕೆಲಸ ಪಡೆದುಕೊಳ್ಳಲಾಗದೆ, ತಾನು ಓದಿದ ಓದಿಗೂ ತಾನು ಮಾಡುತ್ತಿರುವ ಕೆಲಸಕ್ಕೂ ಸಂಬಂಧವೇ ಇಲ್ಲದೆ ಉದ್ಯೋಗದ ಬೆನ್ನುಹತ್ತಿ ಕಂಗಾಲಾಗಿ ಪರಿತಪಿಸುತ್ತಾ ಜೀವನ ನಿರ್ವಹಿಸಲು ಯಾವುದೋ ಉದ್ಯೋಗದ ಬೆಂಬತ್ತಿ ಸಾಗುತ್ತಿರುವ ಸಮಕಾಲೀನ ವಿದ್ಯಾವಂತರ ಬದುಕಿನ ತಲ್ಲಣಗಳನ್ನು ಪ್ರತಿಬಿಂಬಿಸುತ್ತದೆ.

ನಾಗತಿಹಳ್ಳಿಯವರ 'ಅಮೇರಿಕಾ ಅಮೇರಿಕಾ' ಕಾದಂಬರಿಯಲ್ಲಿ ಚಂದ್ರು ಇಂಜಿನಿಯರಿಂಗ್ ಮಾಡಿ ಉದ್ಯೋಗ ದೊರೆಯದೆ ಅಮೇರಿಕಕ್ಕೆ ತೆರೆಳುವುದು ಪ್ರತಿಭಾ ಪಲಾಯನವನ್ನು ಚಿತ್ರಿಸುತ್ತದೆ. ಸುಧಾಕರ ಅವರ ಉಸುಕು ಕಥೆಯ ರಾಮೇಗೌಡನ ವ್ಯಾಸಂಗದ ಚಿತ್ರಣವನ್ನು ಸುಧಾಕರ ಅವರು ಕಟ್ಟಿಕೊಡುವ ರೀತಿ ಮನಮಿಡಿಯುವಂತಿದೆ. ಹಳ್ಳಿಯ ಕಂದಾಚಾರದ, ಮೌಢ್ಯತೆಗಳ ವಿರುದ್ಧ ಹೋರಾಡಿ ಸಾಮಾಜಿಕ ನ್ಯಾಯದ ಪರ ಹಳ್ಳಿಯ ಜನರಲ್ಲಿ ಎಚ್ಚರಿಕೆ ಮೂಡಿಸಿದ ರಾಮೇಗೌಡನ ಸಾವಿಗೆ ಅದೇ ಹಳ್ಳಿಯ ಜನರೇ ಕಾರಣವಾಗುವ ಸ್ಥಿತಿ ವಿದ್ಯಾವಂತರಾಗಿ ಹಳ್ಳಿಯ ಜನರ ಬದುಕನ್ನು ಪರಿವರ್ತಿಸಲು ಹೊರಟ ಇಂದಿನ ಯುವ ಪೀಳಿಗೆಗೆ ಆತಂಕವನ್ನು ಹುಟ್ಟಿಸುತ್ತದೆ.

ಬೆಸಗರಹಳ್ಳಿ ರಾಮಣ್ಣ ಅವರ 'ಪ್ರಜಾಪ್ರಭುತ್ವ ಮತ್ತು ಮೂರು ಮಂಗಗಳು' ಕಥೆಯ ಮಂಚನ ಪಾತ್ರಕ್ಕೂ ಜಾಮೀನು ಸಾಹೇಬ ಕಥೆಯ ಕಥಾನಾಯಕನಾದ ದಯಾನಂದನ ಪಾತ್ರಕ್ಕೂ ತುಂಬಾ ಸಾಮ್ಯತೆಗಳಿವೆ. ಜಾಮೀನು ದಂಧೆ ನಡೆಸುವುದರಲ್ಲಿ ಆಸಕ್ತಿ, ಧೈರ್ಯ ಇಲ್ಲದಿದ್ದರೂ ಅನಿವಾರ್ಯವಾಗಿ ಜಾಮೀನು ದಂಧೆಯೊಳಗೆ ದಯಾನಂದ ಸಿಕ್ಕಿಕೊಳ್ಳುತ್ತಾನೆ. ಮಂಚ ಓದಿಗೆ ತಕ್ಕನಾದ

ಸರಿಯಾದ ನೌಕರಿ ದೊರೆಯದೆ ಕೋತಿ ಆಡಿಸುವ ಕಸುಬನ್ನು ಮಾಡುವುದು, ಅದನ್ನು ಹಿಂಸೆಯೆಂಬ ನೆಪವೊಡ್ಡಿ ಪೋಲೀಸಿನವರು ಬಂಧಿಸುವ ರೀತಿ ಓದಿದ ವಿದ್ಯಾವಂತರ ಹೀನಾಯ ಬದುಕಿನ ಸ್ಥಿತಿಗತಿಯ ಮೇಲೆ ಬೆಳಕು ಚೆಲ್ಲುತ್ತದೆ. ಒಟ್ಟಾರೆಯಾಗಿ ಜಾಮೀನು ಸಾಹೇಬ ಕಥೆಯು ವಿದ್ಯಾವಂತರ ನಿರುದ್ಯೋಗ ಸಮಸ್ಯೆಯ ಬಗ್ಗೆ ಮಾತನಾಡುವ ಮನಮಿಡಿಯುವ ಕಥೆಯಾಗಿದೆ.

**KEYWORDS:** ಜಾಮೀನು, ದೈಹಿಕ ಕ್ಷಮತೆ, ಪುಢಾರಿ, ಸ್ತ್ರೀ ಶೋಷಣೆ, ಮೀಸಲಾತಿ, ನಿರುದ್ಯೋಗ.

ಕನ್ನಡ ನವ್ಯ ಸಾಹಿತ್ಯದ ಎರಡನೇ ಪೀಳಿಗೆಯ ಕೊನೆಯ ತಲೆಮಾರಿನ ಕಥೆಗಾರರ ಪೈಕಿ 'ವಿವೇಕ ಶಾನಭಾಗ'ರು ಬಹಳ ಮುಖ್ಯ ಕಥೆಗಾರರಾಗಿದ್ದಾರೆ. ಜಾಗತೀಕರಣದ ಸಂದರ್ಭದಲ್ಲಿ, ಜಾಗತೀಕರಣದ ನಂತರದ ದಿನಗಳಲ್ಲಿ ಭಾರತೀಯರ ಸಾಂಸ್ಕೃತಿಕ ಬದುಕಿನಲ್ಲಾದ ತಲ್ಲಣಗಳ ಚಿತ್ರಣವನ್ನು ಇವರು ತಮ್ಮ ಕಥೆಗಳಲ್ಲಿ ಸಹಜವಾಗಿ ಕಟ್ಟಿಕೊಟ್ಟಿದ್ದಾರೆ. ಬಡವರ, ಮಧ್ಯಮ ವರ್ಗದವರ, ಕೆಳ ಮಧ್ಯಮ ವರ್ಗದವರ ಜ್ವಲಂತ ಸಮಸ್ಯೆಗಳನ್ನು ಸಹಜವಾಗಿ ತಮ್ಮ ಕಥೆಗಳಲ್ಲಿ ಚಿತ್ರಿಸಿದ್ದಾರೆ.

ಇವರ 'ಹುಲಿಸವಾರಿ' ಕಥಾ ಸಂಕಲನದ 'ಜಾಮೀನು ಸಾಹೇಬ' ನನ್ನನ್ನು ಬಹುವಾಗಿ ಕಾಡಿದ ಕಥೆ. ಈ ಕಥೆ ನಿರುದ್ಯೋಗ ಸಮಸ್ಯೆಯ ಬಗ್ಗೆ ಮನಮಿಡಿಯುವಂತೆ ಮಾತನಾಡುತ್ತದೆ. ಸಮಕಾಲೀನ ಸಂದರ್ಭದಲ್ಲಿ ಬಡವರು, ಮಧ್ಯಮ ವರ್ಗದವರು, ಕೆಳಮಧ್ಯಮ ವರ್ಗದವರು ಉನ್ನತ ಶಿಕ್ಷಣವನ್ನು ಪಡೆಯುವುದೇ ಸವಾಲಿನ ಕೆಲಸವಾಗಿದೆ. ಜಾತಿ, ಹಣ, ಸ್ವಜನ ಪಕ್ಷಪಾತ, ಮೀಸಲಾತಿ ಇತ್ಯಾದಿ ಕಾರಣಗಳಿಂದ ಅರ್ಹ ಅಭ್ಯರ್ಥಿಗಳಿಗೆ ನೌಕರಿ ದೊರೆಯುವುದಿಲ್ಲ. ನೌಕರಿ ಪಡೆದ ಅನರ್ಹರು ವ್ಯವಸ್ಥೆಯನ್ನು ಹಾಳು ಮಾಡುತ್ತಾರೆ. ವಿದ್ಯೆಗೆ ತಕ್ಕನಾದ ಉದ್ಯೋಗ ದೊರೆಯದೇ, ಸಂಸಾರವನ್ನು ಸಾಕಲಾಗದೇ ಆತ್ಮಹತ್ಯೆ ಮಾಡಿಕೊಂಡ, ಮನೆಬಿಟ್ಟು ಹೋದ ಮದುವೆಯಾಗದೆ ಉಳಿದ ಯುವಕರ ಸಂಖ್ಯೆ ಸಾಕಷ್ಟಿದೆ.

ನಾಗತಿಹಳ್ಳಿಯವರ 'ಅಮೇರಿಕಾ ಅಮೇರಿಕಾ' ಕಾದಂಬರಿಯಲ್ಲಿ 'ಚಂದ್ರು ಇಂಜಿನಿಯರಿಂಗ್ ಮಾಡಿ, ಉದ್ಯೋಗ ದೊರೆಯದೆ ಅಮೇರಿಕಕ್ಕೆ ಉದ್ಯೋಗಕ್ಕಾಗಿ ಹೋಗುತ್ತಾನೆ. ನಮ್ಮ ವ್ಯವಸ್ಥೆಯಲ್ಲಿ ಮೀಸಲಾತಿಯ ಕಾರಣದಿಂದ ಅರ್ಹರಿಗೆ ಉದ್ಯೋಗವಕಾಶಗಳು ದೊರೆಯುವುದಿಲ್ಲ, ಸರ್ಕಾರಿ ನೌಕರಿ ಅಥವಾ ಖಾಯಂ ನೌಕರಿ ದೊರೆಯದ ಸಾಕಷ್ಟು ಯುವಕರಿಗೆ ವ್ಯವಸಾಯದಿಂದ ಬದುಕನ್ನು

ಕಟ್ಟಿಕೊಳ್ಳಲು ಅವಕಾಶವಿರುವುದಿಲ್ಲ, ವ್ಯವಸಾಯದಿಂದ ಬದುಕನ್ನು ಕಟ್ಟಿಕೊಳ್ಳಲು ಅವಕಾಶವಿದ್ದರೂ ಅವರಲ್ಲಿ ದೈಹಿಕ ಕ್ಷಮತೆ ಇರುವುದಿಲ್ಲ. ದೈಹಿಕ ಕ್ಷಮತೆ ಇದ್ದರೂ ವ್ಯವಸಾಯ ಲಾಭದಾಯಕವಾಗಿರುವುದಿಲ್ಲ, ವ್ಯವಸಾಯ ಲಾಭದಾಯಕವಾಗಿದ್ದರೂ, ಸಮಾಜ ಆತನನ್ನು ನೋಡುವ ಆಲೋಚನಾ ಕ್ರಮ ವಿಭಿನ್ನವಾಗಿರುತ್ತದೆ.

ಉನ್ನತ ವ್ಯಾಸಂಗ ಮಾಡಿ, ನೌಕರಿ ದೊರೆಯುವ ಸಾಧ್ಯತೆ ಇದ್ದು ಸಹ, ಊರಿಗೆ ಮರಳಿ, ಊರಿನ ಬೆಳವಣಿಗೆಗೆ ಶ್ರಮಿಸುವ ವಿದ್ಯಾವಂತ ಯುವಕರನ್ನು ಸಮಾಜ ಗೌರವದಿಂದ ಕಾಣುವುದಿಲ್ಲ, ಅಂತಹ ವ್ಯಕ್ತಿಗಳನ್ನು ಆಧುನಿಕ ಭಿಕ್ಷುಕ, ಪುಢಾರಿ, ಚಿಲ್ಲರೆ ಮನುಷ್ಯ ಇತ್ಯಾದಿ ಹೆಸರುಗಳಿಂದ ಕರೆಯುತ್ತಾರೆ.

ಸುಧಾಕರ ಅವರ 'ಉಸುಕು' ಕಥೆಯ ರಾಮೇಗೌಡನ ವ್ಯಾಸಂಗದ ಚಿತ್ರಣವನ್ನು ಸುಧಾಕರ ಅವರು ಹೀಗೆ ಕಟ್ಟಿಕೊಡುತ್ತಾರೆ. "ಬಿ.ಎ. ಪಾಸು ಮಾಡಿ ಸರ್ಕಾರಿ ನೌಕರಿಯಲ್ಲಿರಲು ಇಚ್ಚಿಸದೆ ಸ್ವತಂತ್ರವಾಗಿ ಜೀವನ ಸಾಗಿಸಬೇಕು ಎಂದು ಹಳ್ಳಿಗೆ ಬಂದು ವೈಜ್ಞಾನಿಕ ರೀತಿಯಲ್ಲಿ ವ್ಯವಸಾಯವನ್ನು ಮಾಡುತ್ತಾ, ಹಳ್ಳಿಯ ಕಂದಾಚಾರ ಮೌಢ್ಯಗಳನ್ನು ತೊಡೆದು ಹಾಕಲು ಯತ್ನಿಸುತ್ತಾ, ದಮನಕ್ಕೊಳಗಾದವರ ಪರ ನಿಂತು ಸಾಮಾಜಿಕ ನ್ಯಾಯಕ್ಕಾಗಿ ಹೋರಾಡುತ್ತಾ ಹಾಗೂ ಅವರಲ್ಲಿ ಎಚ್ಚರ ಮೂಡಿಸುತ್ತಾ ಅಂತರಂಗದಲ್ಲಿ ಬೆಳಕನ್ನು ತುಂಬಿಕೊಂಡು ಮಿಣುಕು ಹುಳದಂತೆ ಜೀವಂತವಾಗಿ ಮಿನುಗುವ ತರುಣ ರಾಮೇಗೌಡ".[1] ಗ್ರಾಮೀಣ ಭಾರತ ಅಭಿವೃದ್ಧಿಯಾಗದಿರಲು ಜನರ ಸಂಕುಚಿತ ಮನೋಭಾವನೆಯೇ ಕಾರಣ ರಾಮೇಗೌಡನ ಧನಾತ್ಮಕ ಚಿಂತನೆಗಳನ್ನು ತಪ್ಪಾಗಿ ತಿಳಿದ ಗ್ರಾಮಸ್ಥರು ಅವನ ಸಾವಿಗೆ ಕಾರಣರಾಗುತ್ತಾರೆ.

'ಜಾಮೀನು ಸಾಹೇಬ' ಕಥೆಯ ಕಥಾನಾಯಕ ವಿಶಿಷ್ಟ ವ್ಯಕ್ತಿ. ಈತ ತಕ್ಕಮಟ್ಟಿಗೆ ಶ್ರೀಮಂತ ಕುಟುಂಬದಲ್ಲಿ ಹುಟ್ಟಿದರೂ, ಇವನ ಯೌವ್ವನದ ವೇಳೆಗೆ ಕುಟುಂಬದಲ್ಲಿ ಬಡತನ ನೆಲೆಸಿರುತ್ತದೆ. ದಯಾನಂದನ ತಂದೆಯು ಆತನ ತಮ್ಮಂದಿರು ಮಾಡಿದ ಮೋಸದಿಂದ ದಯಾನಂದ ಕಂಗಲಾಗಿ ಹೋಗುತ್ತಾನೆ. ದಯಾನಂದನಿಗೆ 'ಜಾಮೀನು' ಕೊಡಿಸುವುದೇ ಪೂರ್ಣ ಪ್ರಮಾಣದ ಕೆಲಸವಾಗುತ್ತದೆ. ಆರಂಭದಲ್ಲಿ ಆರೋಪಿಗಳಿಗೆ ಜಾಮೀನು ನೀಡುವುದು ತಪ್ಪೆಂದು ತಿಳಿದಿದ್ದರೂ ಆ ಕಾರ್ಯ ಅವನಿಗೆ ತೀರ ಅನಿವಾರ್ಯವಾಗುತ್ತದೆ. ಮೊದಲ ಪ್ರಕರಣವೆಂದರೆ ಸೈಕಲ್ ಸವಾರಿ ಮಾಡುತ್ತಿದ್ದ ವ್ಯಕ್ತಿಗೆ ಆಂಧ್ರದ ವ್ಯಕ್ತಿಯೋರ್ವ, ಕಾರು ಹತ್ತಿಸಿ ಅಪಘಾತ ಮಾಡಿದ ಪ್ರಕರಣದಲ್ಲಿ ದಯಾನಂದ ಆಂಧ್ರದ ವ್ಯಕ್ತಿಗೆ ಯಶಸ್ವಿಯಾಗಿ ಜಾಮೀನು ಕೊಡಿಸುತ್ತಾನೆ. ಕುಮಟದ ಹೋಟೆಲೊಂದರ ಮೇಲೆ ಪೋಲೀಸರು ದಾಳಿ ನಡೆಸಿ

ಹುಡುಗಿಯರ ಸಮೇತ ಸಿಕ್ಕಿ ಹಾಕಿಕೊಂಡವರಲ್ಲಿ ಕುಮಟಾದ ಬ್ಯಾಂಕಿನಲ್ಲಿ ಕೆಲಸ ಮಾಡುವವನೊಬ್ಬನಿದ್ದ. ಅವನಿಂದ 250 ರೂಪಾಯಿ ಪಡೆದು ಆತನಿಗೆ ಜಾಮೀನು ಕೊಡಿಸದ್ದಕ್ಕಾಗಿ ಶುರುವಾಯಿತು ದಯಾನಂದನ ಜಾಮೀನಿಗೆ ನಿಲ್ಲುವ ದಂದೆ.

ದಯಾನಂದನನಿಗೆ 'ಜಾಮೀನು' ದಂಧೆ ನಡೆಸುವುದರಲ್ಲಿ ಆಸಕ್ತಿ, ಧೈರ್ಯ, ಇಲ್ಲದಿದ್ದರೂ ಅನಿವಾರ್ಯವಾಗಿ ಜಾಮೀನು ದಂಧೆಯೊಳಗೆ ಸಿಕ್ಕಿಹಾಕಿಕೊಳ್ಳುತ್ತಾನೆ. ಬಿ.ಎ ಪಾಸು ಮಾಡಲಾಗದ, ಆತನಿಗೆ ನೌಕರಿ ದೊರೆಯುವ ಸಾಧ್ಯತೆ ಇರುವುದಿಲ್ಲ, ದಯಾನಂದನ ಶೈಕ್ಷಣಿಕ ಹಿನ್ನಲೆಯನ್ನು ನಿರೂಪಕರು ಹೀಗೆ ವಿವರಿಸುತ್ತಾರೆ."ದಯಾನಂದ ಮೊದಲನೇ ಸಲ ಜಾಮೀನು ನೀಡಿದ್ದು ತನ್ನ ಅಪ್ಪನಿಗೆ. ಆಗ ಅವನಿಗೆ ಇಪ್ಪತ್ತೆರಡು ವರ್ಷ. ಬಿ.ಎ. ಕೊನೆಯ ವರ್ಷದ ಪರೀಕ್ಷೆಯನ್ನು ಎರಡು ಸಲ ಪ್ರಯತ್ನಿಸಿದರೂ ಪಾಸಾಗದೆ ಹೆಣಗಾಡುತ್ತಿದ್ದ. ಅವನ ವಾರಿಗೆಯ ಹಲವರು ಪರೀಕ್ಷೆಗಳನ್ನೂ ದಾಟಿ ಹುಬ್ಬಳ್ಳಿ, ಕೊಲ್ಲಾಪುರ, ಮುಂಬಯಿ ಅಂತೆಲ್ಲೋ ಹೋಗಿ ನೌಕರಿ ಹಿಡಿದು ರಜೆಯಲ್ಲಿ ಊರಿಗೆ ಬಂದಾಗ ಅವರನ್ನು ನೋಡಿದಾಗ ತಾನು ಒಂದು ನೌಕರಿ ಹಿಡಿಯಬೇಕೆನಿಸುತ್ತಿತ್ತು".[2] ತಕ್ಕ ವಿಧ್ಯಾಭ್ಯಾಸಕ್ಕೆ ತಕ್ಕ ನೌಕರಿ ದೊರೆಯದಿದ್ದಾಗ ತನ್ನ ಅಂಗಡಿಯ ಜಾಗದಲ್ಲಿ ತೆಂಗಿನಕಾಯಿ ವ್ಯಾಪಾರ ಶುರು ಮಾಡುತ್ತಾನೆ. ತೆಂಗಿನಕಾಯಿ ವ್ಯಾಪಾರದಿಂದ ಅಷ್ಟು ಲಾಭ ದೊರೆಯದಿದ್ದಾಗ ಹೆದ್ದಾರಿಯಲ್ಲಿ ಹೆಂಡಮಾರಲು ಪ್ರಾರಂಭಿಸುತ್ತಾನೆ. ತೆಂಗಿನಕಾಯಿ ವ್ಯಾಪಾರದಿಂದ, ಹೆಂಡ ಮಾರಾಟದಿಂದ ಬಂದ ಲಾಭದ ಹಣದಿಂದ ಜೀವನ ನಡೆಸುವುದು ಕಷ್ಟಸಾಧ್ಯವಾದಾಗ ಅನಿವಾರ್ಯವಾಗಿ ಜಾಮೀನು ಕೊಡಿಸುವ ಕೆಲಸಕ್ಕಿಳಿಯುತ್ತಾನೆ.

ದಯಾನಂದನನಿಗೆ ಆರಂಭದ ಎರಡು ಮೂರು ಪ್ರಕರಣಗಳಲ್ಲಿ ಸಾಕಷ್ಟು ಭಯವಾದರೂ ಮುಂದಿನ ಪ್ರಕರಣಗಳಲ್ಲಿ ಆ ಭಯ ಇಲ್ಲವಾಗುತ್ತದೆ. ಒಬ್ಬ ವ್ಯಕ್ತಿಯು ಯಾವ ಕ್ಷೇತ್ರದಲ್ಲಿ ತೊಡಗಿಸಿಕೊಂಡಿರುತ್ತಾನೋ, ಆ ಕ್ಷೇತ್ರದ ಬಗ್ಗೆ ಅಪ್ರತಿಮ ಪಾಂಡಿತ್ಯವ ಗಳಿಸಿಕೊಂಡಿರಬೇಕಾಗುತ್ತದೆ. ಜಾಮೀನು ವಿಷಯದಲ್ಲಿ ದಯಾನಂದನನಿಗೆ ಆತನ ವಕೀಲರಾದ ನಾಯಕರ ಕಡೆಯಿಂದ ವಿಷಯ ಪ್ರಭುತ್ವ ಬಂದಿರುತ್ತದೆ. ಜಾಮೀನಿನ ವಿಚಾರದಲ್ಲಿ ದಯಾನಂದನ ವಿಷಯ ಪಾಂಡಿತ್ಯವನ್ನು ನಿರೂಪಕರು ಹೀಗೆ ವಿವರಿಸುತ್ತಾರೆ. "ತಾನು ಜಾಮೀನು ನಿಂತ ಪ್ರತಿ ಕೇಸನ್ನೂ ಕೊನೆ ಮುಟ್ಟುವವರೆಗೂ ಗಮನಿಸುತ್ತಿದ್ದ. ಅದು ಎಷ್ಟರವರೆಗೂ ಹೋಯಿತೆಂದರೆ ಅದೊಂದು ಚಟವಾಯಿತು, ಆಟವಾಯಿತು. ಅಂಗೈಯ ನೆಲ್ಲಿಯಾಯಿತು. ಅಪರಾಧದ ವಿವರ ಗೊತ್ತಾದರೆ ಕೋರ್ಟಿನ ತೀರ್ಮಾನ ಏನು ಅನ್ನುವುದನ್ನು ನಿಖರವಾಗಿ ಹೇಳುವಷ್ಟು ಪರಿಣಿತನಾದ.ಕಳ್ಳ ಸಾಗಣೆ ಮಾಡುವವನಿಗೆ ಮಾತ್ರ ಜಾಮೀನು ನಿಲ್ಲಬಾರದೆಂಬ

ನಾಯಕರ ಮಾತನ್ನು ಅಕ್ಷರಶಃ ಪಾಲಿಸಿದ."[3] ದಯಾನಂದ ತಾನು ಜಾಮೀನು ನೀಡುವ ಆರೋಪಿಗಳಿಗೆಲ್ಲ ಅವರು ನಿರಪರಾಧಿಗಳೇ, ಅನಿವಾರ್ಯವಾಗಿ ಅವರು ಅಪರಾಧ ಮಾಡಿರುತ್ತಾರೆ ಎಂಬ ಭಾವನೆಯಿಂದಲೇ ಜಾಮೀನು ಕೊಡಿಸುತ್ತಿದ್ದ.

'ಶೀನ'ಎಂಬ ವ್ಯಕ್ತಿಯ ಪೂರ್ವಪರವನ್ನು ಅರಿಯದೇ ಆತನನ್ನು ಜಾಮೀನಿನ ಮೇಲೆ ಬಿಡಿಸಿಕೊಂಡು ಬಂದು ಇಕ್ಕಟ್ಟಿಗೆ ಸಿಕ್ಕಿಕೊಳ್ಳುತ್ತಾನೆ. ಶೀನನ ಹೆಂಡತಿ ಇವನ ಬಾಲ್ಯ ಸ್ನೇಹಿತೆ ಎಂಬ ವಿಚಾರ ತಿಳಿಯದೇ ಶೀನನಿಗೆ ಜಾಮೀನು ನೀಡಿರುತ್ತಾನೆ. 'ಶೀನ' 'ಮೀನಾಕ್ಷಿ'ಯ ದಾಂಪತ್ಯದಲ್ಲಿ 'ಶೀನ'ನ ವರ್ತನೆ ತಪ್ಪೆಂದು ತಿಳಿಯುವ ಹೊತ್ತಿಗೆ ಕಾಲ ಮಿಂಚಿ ಹೋಗಿರುತ್ತದೆ. ಶೀನನ ಸ್ತ್ರೀ ಶೋಷಣೆಯ ಪರಿಯನ್ನು ನಿರೂಪಕರು ಹೀಗೆ ವಿವರಿಸುತ್ತಾರೆ. "ಅವಳು ಕೂತರೆ ತಪ್ಪು ನಿಂತರೆ ತಪ್ಪು ಅಂದ. ಸಾರಿಗೆ ಖಾರ ಸಾಲದೆಂದು ಅವಳ ತಲೆಯ ಮೇಲೆ ಅದನ್ನು ಸುರಿಯಲು ಹಿತ್ತಲ ತುಂಬ ಅವಳನ್ನು ಅಟ್ಟಿಸಿಕೊಂಡು ಹೋದ. ಬರೆ ಬರುವಂತೆ ಹೊಡೆದ. ರಾತ್ರಿ ಮನೆಗೆ ಬಂದರೆ ಬಂದ, ಇಲ್ಲದಿದ್ದರೆ ಇಲ್ಲ. ಬಂದಾಗ ಅವಾಚ್ಯ ಶಬ್ಧಗಳಿಂದ ಬೈಯುತ್ತಿದ್ದ. ಒಂದು ದಿನ ಕೊಂದೇ ಬಿಡುತ್ತೇನೆಂದು ಬಂದವನಿಂದ ತಪ್ಪಿಸಿಕೊಳ್ಳಲು ಕೋಣೆಯೊಳಗೆ ಹೊಕ್ಕಿ ಕೂತಳು".[4] ತನ್ನ ಅಮ್ಮನಿಂದ ನಿಜ ತಿಳಿದ ದಯಾನಂದ ಮಮ್ಮಲ ಮರಗುತ್ತಾನೆ. 'ದಯಾನಂದನ' ಪಾತ್ರ ರಚನೆಗೂ, ಬೆಸಗರಹಳ್ಳಿ ರಾಮಣ್ಣ ಅವರ 'ಪ್ರಜಾಪ್ರಭುತ್ವ ಮತ್ತು ಮೂರು ಮಂಗಗಳು' ಕಥೆಯ ಮಂಚನ ಪಾತ್ರಕ್ಕೂ ತುಂಬಾ ಸಾಮ್ಯತೆಗಳಿವೆ. 'ಮಂಚ' ಆತನ ಓದಿಗೆ ತಕ್ಕನಾದ ಸರಿಯಾದ ನೌಕರಿ ದೊರೆಯದೇ ಕೋತಿ ಆಡಿಸುವ ಕಸುಬನ್ನು ಕಲಿತುಕೊಂಡಿರುತ್ತಾನೆ. ಆದರೆ ಪೋಲಿಸರು ಆತನನ್ನು ಪ್ರಾಣಿ ಹಿಂಸೆ ಮಾಡಿದ ಪ್ರಕರಣದಲ್ಲಿ ಬಂಧಿಸುತ್ತಾರೆ. 'ಮಂಚ' ಅನಿವಾರ್ಯವಾಗಿ, ಜೀವನ ನಿರ್ವಹಣೆಗಾಗಿ ಕೋತಿ ಆಡಿಸುವ ಕಲೆಯನ್ನು ಕರಗತ ಮಾಡಿಕೊಂಡಿರುತ್ತಾನೆ. ಅದು ಖಂಡಿತವಾಗಿಯೂ ತಪ್ಪಲ್ಲ. ಏಕೆಂದರೆ ಆತ ಕಳ್ಳತನವನ್ನಾಗಲಿ, ದರೋಡೆಯನ್ನಾಗಲೀ ಮಾಡಿಲ್ಲ. ಜೀವನ ನಿರ್ವಹಣೆಗಾಗಿ ಒಂದು ಕಲೆಯನ್ನು ಕರಗತ ಮಾಡಿಕೊಂಡಿದ್ದಾನೆ.

ದಯಾನಂದ ತನ್ನ ಬಳಿ ಬರುವ ಆರೋಪಿಗಳನ್ನು ಹೆಚ್ಚು ಕಡಿಮೆ ಅವರು ಭಾಗಶಃ ಒಳ್ಳೆಯವರು, ಅನಿವಾರ್ಯವಾಗಿ ಅಪರಾಧ ಮಾಡಿರುತ್ತಾರೇ ಎಂಬ ನಂಬಿಕೆಯ ಆಧಾರದ ಮೇಲೆ ಜಾಮೀನು ಕೊಡಿಸಿರುತ್ತಾನೆ.'ಮೀನಾಕ್ಷಿ' ಯ ಪ್ರಕರಣದಲ್ಲಿ ಆತನ ಲೆಕ್ಕಚಾರಗಳೆಲ್ಲವೂ ತಲೆಕೆಳಗಾಗುತ್ತವೆ. ಮೀನಾಕ್ಷಿ ಆತನ ಬಾಲ್ಯ ಸ್ನೇಹಿತೆ ಎಂದು ತಿಳಿಯುವ ವೇಳೆಗೆ ಅನರ್ಥ ನಡೆದು ಹೋಗಿರುತ್ತದೆ. ಮೀನಾಕ್ಷಿ ಮತ್ತು ದಯಾನಂದನ ಸ್ನೇಹದ ಸ್ವರೂಪವನ್ನು ನಿರೂಪಕರು ಹೀಗೆ

ವಿವರಿಸುತ್ತಾರೆ. "ಮೀನಾಕ್ಷಿ ದಯಾನಂದನ ಮನೆಯ ಪಕ್ಕದಲ್ಲೇ ಇದ್ದಾಗ ಇಬ್ಬರೂ ಏಳನೇ ತರಗತಿಯವರೆಗೂ ಒಂದೇ ಶಾಲೆಯಲ್ಲಿ ಓದಿದರು. ಶಾಲೆಗೆ ಹೋಗುವಾಗ ಒಟ್ಟಿಗೆ ಹೋಗಿ ಬರುತ್ತಿದ್ದರು. ಅವಳು ಅವನ ಮನೆಯ ಜಗುಲಿಯಲ್ಲಿ ಅವನಿಗಾಗಿ ಕಾಯುತ್ತಾ ನಿಂತಾಗಲೇ ಪುಸ್ತಕಗಳನ್ನು ಲಗುಬಗೆಯಿಂದ ಜೋಡಿಸಿಕೊಳ್ಳುತ್ತಿದ್ದ".[5] ತನ್ನ ಜೀವನದ ನಿರ್ವವಣೆಗಾಗಿ, ಹಣಕ್ಕಾಗಿ, ಸ್ನೇಹಿತೆಯ ಜೀವನವನ್ನು ಹಾಳು ಮಾಡಿದೆ ಎಂಬ ಕೊರಗು ದಯಾನಂದನನನ್ನು ಕಾಡುತ್ತದೆ.

'ಜಾಮೀನು ಸಾಹೇಬ' ಕಥೆಯೂ ಶೈಕ್ಷಣಿಕ ನಿರುದ್ಯೋಗ ಸಮಸ್ಯೆಯ ಬಗ್ಗೆ ಮಾತನಾಡುವ ಕಥೆಯಾಗಿದೆ. ದಯಾನಂದ ಬಿ.ಎ., ಪದವಿಯಲ್ಲಿ ಅನುತ್ತೀರ್ಣನಾಗಿದ್ದರೂ ಸಹ ಆತನ ಓದಿಗೆ ಸರಿಯಾದ ನೌಕರಿ ದೊರೆಯುವುದಿಲ್ಲ. ವ್ಯಾಪಾರದಿಂದ ಜೀವನ ನಡೆಸಲು ಸಾಧ್ಯವಾಗದೇ 'ಜಾಮೀನು' ಕೊಡಿಸುವುದನ್ನೇ ತನ್ನ ಖಾಯಂ ವೃತ್ತಿಯಾಗಿ ಮಾಡಿಕೊಳ್ಳುತ್ತಾನೆ. ಮೂವತ್ತು ವರ್ಷಗಳ ಹಿಂದಿನ ಕಲಾವಿಭಾಗದ ವಿದ್ಯಾರ್ಥಿಗಳ ಸ್ಥಿತಿ–ಗತಿ, ಪರದಾಟ, ಗೋಳನ್ನು ಕಥೆಯಲ್ಲಿ ಕಾಣಬಹುದು. ಪ್ರಸ್ತುತ ಸಂದರ್ಭದಲ್ಲಿ ಕಲಾವಿಭಾಗದಲ್ಲಿ ಓದಿದವರಿಗೆ ಸರ್ಕಾರಿ ನೌಕರಿ ದೊರೆಯುವುದು ಕಷ್ಟ. ಕಲಾ ವಿಭಾಗದಲ್ಲಿ ಓದಿದ ವಿದ್ಯಾರ್ಥಿಗಳಿಗೆ ಕೆಲಸ ದೊರೆಯದ ಕಾರಣದಿಂದ ಮಾಡುವ ಸಣ್ಣಪುಟ್ಟ ಸೇವೆಗಳನ್ನು ಜನ ಧನಾತ್ಮಕವಾಗಿ ಸ್ವೀಕರಿಸುವುದಿಲ್ಲ. ನಿರುದ್ಯೋಗಿ ಯುವಕರು ಕಂದಾಯ ಇಲಾಖೆ, ಕೋರ್ಟು, ಭೂಮಾಪನ ಇಲಾಖೆ, ನೀರಾವರಿ ಇಲಾಖೆ ಇತ್ಯಾದಿ ಇಲಾಖೆಗಳಲ್ಲಿ ಓಡಾಡುವುದರಿಂದ ಸಾರ್ವಜನಿಕರಿಗೆ ಸಹಾಯವಾಗುತ್ತದೆ. ಸಹಾಯ ಪಡೆದ ಸಾರ್ವಜನಿಕರು ನಿರುದ್ಯೋಗಿ ಯುವಕರನ್ನು ಗೌರವದಿಂದ ಕಾಣದೆ ಪುಡಾರಿ, ಚಿಲ್ಲರೆ ಎಂದು ಕರೆಯುತ್ತಾರೆ.

**ಕೊನೆ ಟಿಪ್ಪಣಿ:**

1. ಜಲದ ಕಣ್ಣು (2012), ಸುಧಾಕರ, ತನುಶ್ರೀ ಪ್ರಕಾಶನ, ಮೈಸೂರು, ಪು.ಸಂ. 256
2. ಹುಲಿ ಸವಾರಿ, ವಿವೇಕ ಶಾನಭಾಗ (2012), ಅಕ್ಷರ ಪ್ರಕಾಶನ, ಹೆಗ್ಗೋಡು, ಪು.ಸಂ. 43.
3. ಹುಲಿ ಸವಾರಿ, ವಿವೇಕ ಶಾನಭಾಗ (2012), ಅಕ್ಷರ ಪ್ರಕಾಶನ, ಹೆಗ್ಗೋಡು, ಪು.ಸಂ. 52.
4. ಹುಲಿ ಸವಾರಿ, ವಿವೇಕ ಶಾನಭಾಗ (2012), ಅಕ್ಷರ ಪ್ರಕಾಶನ, ಹೆಗ್ಗೋಡು, ಪು.ಸಂ. 52.
5. ಹುಲಿ ಸವಾರಿ, ವಿವೇಕ ಶಾನಭಾಗ (2012), ಅಕ್ಷರ ಪ್ರಕಾಶನ, ಹೆಗ್ಗೋಡು, ಪು.ಸಂ. 56.

**ಆಕರ ಗ್ರಂಥಗಳು:**

1. ಕಣಜ, ಬೆಸಗರಹಳ್ಳಿ ರಾಮಣ್ಣ (2009), ಲೋಹಿಯಾ, ಬಳ್ಳಾರಿ.
2. ಜಲದ ಕಣ್ಣು (2012), ಸುಧಾಕರ, ತನುಶ್ರೀ ಪ್ರಕಾಶನ, ಮೈಸೂರು.
3. ಹುಲಿ ಸವಾರಿ, ವಿವೇಕ ಶಾನಭಾಗ (2012), ಅಕ್ಷರ ಪ್ರಕಾಶನ, ಹೆಗ್ಗೋಡು.